ತಿರುಪತಿ ತಿರುಮಲ ದೇವಸ್ಥಾನ ಸಮಿತಿಯಲ್ಲಿ ಒಬ್ಬರು ಸದಸ್ಯರು ಇರುತ್ತಿದ್ದರು. ಈಗ ಹಾಲಿ ಸಮಿತಿಯಲ್ಲಿ ನಮ್ಮ ಸದಸ್ಯರು ಇಲ್ಲ ನಾನು ಮತ್ತು ನಮ್ಮ ಮುಖ್ಯಮಂತ್ರಿಗಳು ಇಬ್ಬರೂ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದು ಒಬ್ಬರಾದರೂ ಕರ್ನಾಟಕದ ಸದಸ್ಯರು ಸಮಿತಿಯಲ್ಲಿ ಇರಬೇಕೆಂದು ಕೇಳಿಕೊಂಡಿದ್ದೇವೆ. ಅದು ಅವರ ಪರಿಶೀಲನೆಯಲ್ಲಿದೆ ಎಂದು ಭಾವಿಸುತ್ತೇನೆ. ಹಾಗೆ ಅದರೆ ಕರ್ನಾಟಕ ಸರ್ಕಾರದ ಹಕ್ಕು ಮತ್ತು ಅಲ್ಲಿಗೆ ಹೋಗತಕ್ಕ ನಮ್ಮ ಭಕ್ತಾಧಿಗಳಿಗೆ ಅನುಕೂಲ ಮಾಡುವುದಕ್ಕೆ ಸಾಕಷ್ಟು ಸೌಲಭ್ಯಗಳನ್ನು ನಾವು ಒದಗಿಸಬಹುದು.

12 45 ಪಿ.ಎಂ

ಶ್ರೀ ಕೆ. ಲಕ್ಕಣ್ಣ: ಮಾನ್ಯ ಅಧ್ಯಕ್ಷರೇ, ನಾವು ಕೇಳುವುದಿಲ್ಲ. ಒತ್ತಾಯ ಮಾಡಬೇಕು. ಇದು ಕೃಷ್ಣದೇವರಾಯನ ಕಾಲದಿಂದ, ಸಾವಿರಾರು ವರ್ಷಗಳಿಂದ, ಬಂದಿರತಕ್ಕ ನಮ್ಮ ಹಕ್ಕು. ಮೊದಲನೇ ಪೂಜೆ ನಮ್ಮ ಕರ್ನಾಟಕದಿಂದ ಆಗಬೇಕು, ಇದು ಮಹಾರಾಜರ ಕಾಲದಲ್ಲೇ ತೀರ್ಮಾನ ಆಗಿದೆ. ಆದರೆ, ಇದಕ್ಕೆ ಹಕ್ಕುಪತ್ರ ಇಲ್ಲವೆಂದು ಒಬ್ಬ ಅಧಿಕಾರ ರಿಜಿಸ್ಟ್ ಮಾಡುವುದಾದರೆ, ತುಂಬಾ ಅವಮಾನ. ಈ ದಿಸೆಯಲ್ಲಿ ಮಾನ್ಯಮಂತ್ರಿಗಳು ಖುದ್ದಾಗಿ ಹೋಗಿ, ನಕ್ಷೆಯನ್ನು ಮಂಜೂರ್ಮಾಡಿಸಿಕೊಟ್ಟು ಕಟ್ಟಡಗಳನ್ನು ಬೇಗ ಕಟ್ಟತಕ್ಕ ವ್ಯವಸ್ಥೆ ಮಾಡಬೇಕೆಂದು ಈ ಸಭೆಯ ಮುಖಾಂತರ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿರುವುದು ನಿಜವಾಗಿದೆ. ಸರ್ಕಾರ ಈ ಬಗ್ಗೆ ಸರ್ವಪ್ರಯತ್ನವನ್ನು ಮಾಡುತ್ತಿದೆ, ಒತ್ತಾಯವನ್ನೂ ಹಾಕುತ್ತಿದೆ. ಆಂಧ್ರ ಮುಖ್ಯಮಂತ್ರಿಯವರಿಗೂ ತಿಳಿಸಿ, ಅವರಿಂದಲೂ ಕೂಡ ಒತ್ತಾಯವನ್ನು ಹಾಕಿಸಿ, ಆ ಸಮಿತಿಯಿಂದ ಆದಷ್ಟು ಬೇಗ ಅನುಮತಿ ದೊರೆಯುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಮಂಗಳೂರಿನ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣ ಕುರಿತು

501 - ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ನೂತನ ಕಟ್ಟಡ ನಿರ್ಮಾಣ ಕಾರ್ಯವನ್ನು ಎಂದು ಆರಂಭಿಸಲಾಗಿದೆ?

ಆ) ಆ ಕಟ್ಟಡ ನಿರ್ಮಾಣದ ಅಂದಾಜು ವೆಚ್ಚವೆಷ್ಟು?

ಇ) ಆ ಕಟ್ಟಡವನ್ನು ಯಾವಾಗ ಸಂಪೂರ್ಣಗೊಳಿಸಲಾಗುವುದು?

ಈ) ಆ ಕಟ್ಟಡ ನಿರ್ಮಾಣದ ವಿಳಂಬಕ್ಕೆ ಕಾರಣಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಮಂತ್ರಿಗಳು):

ಅ) ಮೊದಲನೇ ಹಂತದ ಕಾಮಗಾರಿಯನ್ನು ದಿನಾಂಕ 20-9-85ರಲ್ಲಿ ಆರಂಭಿಸಲಾಗಿರುತ್ತದೆ.

ಆ) ಮೂರು ಹಂತಕ್ಕೆ ಮಂಜೂರಾದ ಅಂದಾಜು ರೂ. 222.00 ಲಕ್ಷ ರೂ.ಗಳು (ಮೊದಲನೇ ಹಂತದ ಅಂದಾಜು ಮೊತ್ತ 82.60 ಲಕ್ಷ ರೂ.ಗಳು)

ಇ) ಮೊದಲನೇ ಹಂತದ ಕಾಮಗಾರಿ ಈಗ ಪೂರ್ಣಗೊಂಡಿರುತ್ತದೆ. ಉಳಿದ ಎರಡನೇ ಹಂತದ ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಕಟ್ಟಡದ ತಳಪಾಯದಲ್ಲಿ ಮೆದು ಮಣ್ಣು ದೊರಕಿ ವಿನ್ಯಾಸ ಬದಲಾವಣೆ ಮಾಡಿ, ಪೈಲ್ ಫೌಂಡೇಶನ್ ಅಳವಡಿಸಲು ತೆಗೆದುಕೊಂಡ ಸಮಯದಿಂದ ಕೆಲಸ ವಿಳಂಬವಾಗಿದೆ.

ಶ್ರೀ ವಿಜಯಕುಮಾರ ಶೆಟ್ಟಿ : ಸನ್ಮಾನ್ಯ ಅಧ್ಯಕ್ಷರೇ, ಮಂಗಳೂರಿನ ಜಿಲ್ಲಾಧಿಕಾರಿಗಳ ಕಚೇರಿ ಕಟ್ಟಡದ ಕೆಲಸ 1985ರಲ್ಲಿ ಪ್ರಾರಂಭವಾಗಿದೆ. ಅದಕ್ಕೆ ಇಷ್ಟರಮಟ್ಟಿಗೆ 82 ಲಕ್ಷ ಮಾತ್ರ ಸ್ಯಾಂಕ್ಷನ್ಡಾಡಿ, ಈ 10 ವರ್ಷದಲ್ಲಿ 82 ಲಕ್ಷದ ಕಾಮಗಾರಿ ಆಗಿದೆ. ಇದರ ಒಟ್ಟು ಅಂದಾಜುವೆಚ್ಚ 222 ಲಕ್ಷ ಎಂದು ಹಾಕಿದ್ದಾರೆ. ಬಹುಶಃ ಬಾಕಿ 141 ಲಕ್ಷ ಖರ್ಚು ಮಾಡುವುದಕ್ಕೆ ಮತ್ತು ಈ ವ್ಯವಸ್ಥೆ ಮಾಡುವುದಕ್ಕೆ ಎಷ್ಟು ಸಮಯ ಬೇಕೋ ಎಂದು ಗೊತ್ತಾಗುವುದಿಲ್ಲ. ಅಷ್ಟರಲ್ಲಿ ಈಗಿರತಕ್ಕ ದರಗಳೂ ಕೂಡ ಜಾಸ್ತಿಯಾಗುತ್ತವೆ. ಆದ್ದರಿಂದ, ಈ ಕಾಮಗಾರಿಯನ್ನು ಆದಷ್ಟು ಬೇಗ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ಪ್ರಕಾರ, ನಮ್ಮ ಜಿಲ್ಲೆಯಲ್ಲಿ, ಬೇರೆ ಬೇರೆ ಕಡೆಗಳಲ್ಲಿ ಹೆಚ್ಚಿಗೆ ಬಾಡಿಗೆ ಕೊಡತಕ್ಕ ಸರ್ಕಾರಿ ಕಛೇರಿಗಳೂ ಇವೆ. ರೆಂಟ್ ಕಂಟ್ರೋಲ್ ಮುಖಾಂತರ ಮನೆಗಳನ್ನು ಏನು ಕೊಡುತ್ತಿದ್ದಾರೆ, ಆ ಮನೆಗಳನ್ನು ಸರ್ಕಾರಿ ಕಛೇರಿಗಳಾಗಿ ಮಾಡಲು ಅವಕಾಶ ಕೊಡಬೇಕೆಂದು ಸನ್ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಈಗ ಸಾಕಷ್ಟು ವಿಳಂಬವಾಗಿದೆ. ಆದರೆ, ನಿನ್ನೆ ಮೊದಲನೇ ಹಂತದ ಕಟ್ಟಡದ ಉದ್ಘಾಟನೆ ಆಗಬೇಕಾಗಿತ್ತು, ಅದರ ಪ್ರಾರಂಭೋತ್ಸವ ಆಗಬೇಕಾಗಿತ್ತು. ಇದಕ್ಕೆ ಕಾರ್ಯಕ್ರಮ ಹಮ್ಮಿಕೊಂಡಿದ್ದರು, ಮಾನ್ಯ ಮುಖ್ಯಮಂತ್ರಿಗಳೂ ಹೇಳಿದ್ದರು. ಆದರೆ, ಕಾರಣಾಂತರದಿಂದ ಅದು ಮುಂದೆ ಹೋಗಿದೆ. ಈಗ ಮೊದಲನೇ ಹಂತದ ಕಟ್ಟಡ ಆಗಿದೆ. ಇದು ಪ್ರಾರಂಭವಾದ ಮೇಲೆ, ಅಲ್ಲಿ ಕೆಲವು ಕಛೇರಿಗಳನ್ನು ಹಾಕಿ, ಮುಂದೆ ಶೀಘ್ರವಾಗಿ ಕೆಲಸ ಮುಗಿಸತಕ್ಕಂತಾದ್ದು ನಡೆಯುತ್ತದೆ.

ಶ್ರೀ ವಿಜಯಕುಮಾರ ಶೆಟ್ಟಿ : ರೆಂಟ್ ಕಂಟ್ರೋಲಿನಲ್ಲಿ ಕೆಲವು ಮನೆಗಳು ಇವೆ. ಅವುಗಳನ್ನು ಸರ್ಕಾರಿ ಕಛೇರಿಗಳಾಗಿ ಮಾಡುವುದು ಒಳ್ಳೆಯದು. ಬೇರೆ ಕಡೆ ಬಾಡಿಗೆ ಕೊಡುವುದರಿಂದ, ಸರ್ಕಾರಕ್ಕೆ ಸಿಕ್ಕಾಪಟ್ಟೆ ಬಾಡಿಗೆಗಾಗಿ ಹಣವೂ ಹೋಗುತ್ತಿದೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು.

ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಗೆ ಸಾಕಷ್ಟು ವಿದ್ಯುತ್ ಸರಬರಾಜು ಮಾಡುವ ಬಗ್ಗೆ

804 - ಶ್ರೀ ಎ.ಕೆ. ಅನಂತ ಕೃಷ್ಣ (ಶಿವಾಜಿನಗರ) : ಮಾನ್ಯ ರಾಜ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವಿಭಾಗಕ್ಕೆ ಸೇರಿದ ಕಾವೇರಿ ಯೋಜನೆಯ ಮೂಲದಲ್ಲಿ ಮತ್ತು ಕೆಲವು ಹಂತಗಳಲ್ಲಿ ಇರುವ ನೀರು ಸರಬರಾಜು ಪಂಪ್ಗಳಿಗೆ ಸರಿಯಾಗಿ ವಿದ್ಯುಚ್ಛಕ್ತಿ ಒದಗಿಸದೇ ಇರುವುದರಿಂದ ಬೆಂಗಳೂರಿನ ನಾಗರೀಕರು ಸರಿಯಾಗಿ ನೀರು ಪಡೆಯದೇ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ನೀರನ್ನು ಪಂಪ್ ಮಾಡಲು ಸರಿಯಾದ ವಿದ್ಯುತ್ತನ್ನು ಒದಗಿಸಲು ಬೆಂಗಳೂರಿನ ನಾಗರಿಕರಿಗೆ ಅವರಲ್ಲೂ ಬೇಸಿಗೆ ಮತ್ತು ಹಬ್ಬಗಳ ಸಮಯಗಳಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?*